ಪ್ರಭಾವದಿಂದ ಅವಾಯಕ ಹಳ್ಳಿಗರ ಮೇಲೆ ಇವರ ಭೂಮಿ ಕಾಯಂಲು ನೇಮಿಸಿಕೊಂಡಿದ್ದು ಪರಿಶಿಷ್ಟ ಜಾತಿಯವರಿಂದ ಕಂಪ್ಲೆಂಟ್ ಕೊಡಿಸಿ ಪಿಸಿಆರ್ ಕಾಯಿದೆಯನ್ನು ಉಪಯೋಗಿಸಿದ್ದಾರೆ. ಸಾಲದಿದ್ದಕ್ಕೆ ಇದೇ ಪೋಲೀಸ್ ಬಲವೇ ತಮಗಿರುವ ಬೆಂಬಲವೆಂದು ಸಹ ತೋರಿಸುವ ಪ್ರದರ್ಶನ ಮಾಡಿದ್ದಾರೆ. ಇದರಿಂದಾಗ ಜನ ಭೀತರಾಗಿದ್ದಾರೆ ಜೊತೆಗೆ ಈಗ ಹಾಲಿಯಿರುವ ಹುಣಸೆ ಮರಗಳನ್ನು ಕಡಿಯಲು ಯೋಚಿಸಲಾಗಿರುವುದು ತಿಳಿದಿದೆ. ಪ್ರಯುಕ್ತ ಸಂಬಂಧಿಸಿದ ಶಾಖೆಗಳು ಮರು ಆಳತೆ ಮಾಡಲು ಮತ್ತೆ ಅರಣ್ಯ ಇಲಾಖೆಯು ಈ ಮರಗಳನ್ನು ಕಡಿಯಲು ಅವಕಾಶ ನೀಡದಿರಲು ಹಾಗೂ ಸುಳ್ಳು ಕಂಪ್ಲೇಟ್ ಕೊಡಿಸಿ ಜನರನ್ನು ಫಾಸಿಗೊಳಿಸಲು ಮತ್ತು ಮೊಕದ್ದಮೆ ಎದುರಿಸಲು ಮಾಡಿರುವ ಸಂಚನ್ನು ತನಿಖೆ ಮೂಲಕ ಬಯಲಿಗೆಳೆದು ಇಂತಹ ಸ್ವಾರ್ಥಪರರನ್ನು ಸರಕಾರ ಸರಿಯಾದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ನನ್ನ ವಿನಂತಿ.

ಪ್ರೊ. ಎ. ಲಕ್ಷ್ಮೀಸಾಗರ್.—ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ ತರಿಸಿಕೊಡುತ್ತೇನೆ.

6. ಹುಕ್ಕೇರಿ ತಾಲ್ಲೂಕು ಯಾದಗೂರು ಗ್ರಾಮದಲ್ಲಿ ಎಸ್.ಡಿ.ವಿ.ಎಸ್. ಸಂಘದ ಜೂನಿಯರ್ ಕಾಲೇಜಿಗೆ ಧನ ಸಹಾಯ ನೀಡುವುದು.

ಶ್ರೀ ಎಂ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನ ಯಾದಗೂಡು ಗ್ರಾಮದಲ್ಲಿ ಶ್ರೀ ಎಸ್**ಡಿ.ವಿ.ಎಸ್.** ಸಂಘದ ಆಡಳಿತದಲ್ಲಿರುವ ಜೂನಿಯರ್ ಕಾಂಪೋಸಿಟ್ ಕಾಲೇಜು ಮಂಜೂರಾಗಿ ಸತತವಾಗಿ ೫ ವರ್ಷದವರೆಗೆ ತನ್ನ ಕಾರ್ಯವನ್ನು ಸುವ್ಯವಸ್ಥಿತವಾಗಿ ನಿರ್ವಹಿಸಿದೆ. ಶಿಕ್ಷಣ ಇಲಾಖೆಯ ನಿಯಮಾವಳಿ ಪ್ರಕಾರ ಎಲ್ಲ ಬೇಡಿಕೆಗಳನ್ನು ಈಡೇರಿಸಿದ್ದು ಸರ್ಕಾರದಿಂದ ಕೊಡ ಬೇಕಾಗಿರುವ ಎಲ್ಲ ರೀತಿಯ ಸಹಾಯ ಇಲ್ಲಿಯವರೆಗೆ ಸಿಗದೇ ಇರುವುದು ಸಂಸ್ಥೆಗೆ ಆರ್ಥಿಕ ಮುಗ್ಗಟ್ಟನ್ನು ಎದುರಿಸಬೇಕಾಗಿ ಬಂದಿದೆ.

ಜೂನಿಯರ್ ಕಾಂಪೋಸಿಟ್ ಕಾಲೇಜಿನಿಂದ ಹಾಗೂ ಸಂಘದಿಂದ ಶಿಕ್ಷಣ ಇಲಾಖೆಗೆ ಬೇಡಿಕೆಯನ್ನು ಸಲ್ಲಿಸಿದ್ದು ಹಲವಾರು ದಿನಗಳ ನಂತರ ಕೂಡ ಇದಕ್ಕೆ ಸಹಾಯ ಮಾಡುವ ಇಚ್ಛೆ ಇಲಾಖೆಯಲ್ಲಿರುವ ಕೆಲವೊಂದು ಮಹನೀಯರಿಗೆ ಇಲ್ಲವೆಂದು ಕಾಣುತ್ತದೆ. ಸಹಾಯ ಮಾಡುವ ಸಮಯದಲ್ಲಿ ದೇವರಿಗೆ ಸಲ್ಲಿಸಬೇಕಾದ ಕರ್ಪೂರ, ದೀಪ ಹಾಗೂ ನೈವೇದ್ಯ ದಕ್ಷಿಣೆ ಎಲ್ಲವನ್ನೂ ಕೊಡಬೇಕಾಗುವುದೆನ್ನುವ ಚರ್ಚೆ ನಡೆದಿದೆ. ಇಂತಹ ಪ್ರಕರಣಗಳಲ್ಲಿ ಸರ್ಕಾರ ನೇರವಾಗಿ ಮಾಹಿತಿಯನ್ನು ಪಡೆದುಕೊಂಡು ಸಂಸ್ಥೆಗೆ ಆರ್ಥಿಕ ಮುಗ್ಗಟ್ಟಾಗದಂತೆ ಕೂಡಲೇ ಕೊಡಬೇಕಾಗಿರುವ ಧನ ಸಹಾಯವನ್ನು ಕಾನೂನಿನ ಪ್ರಕಾರ ಕೊಡಿಸಬೇಕಾಗಿ ಒತ್ತಾಯಿಸುತ್ತೇನೆ. ಹಾಗೂ ರಾಜ್ಯದಲ್ಲಿರುವ ಇಂತಹ ಸಂಸ್ಥೆಗಳಿಗೆ ಕೂಡಲೇ ಸರ್ಕಾರ ಸಹಾಯ ನೀಡಬೇಕಾಗಿ ಕೇಳಿಕೊಳ್ಳುತ್ತಾ ಶಿಕ್ಷಣ ಸಚಿವರು ಸದನದಲ್ಲಿ ವಿವರವಾದ ಹೇಳಿಕೆ ಕೊಡಬೇಕೆಂದು ಆಗ್ರಹಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದಕ್ಕೆ ಸಂಬಂಧಪಟ್ಟ ಮಂತ್ರಿಗಳಿಂದ ಹೇಳಿಕೆಯನ್ನು ಕೊಡಿಸುತ್ತೇನೆ

7. ರಾಣೆಬೆನ್ನೂರು ತಾಲ್ಲೂಕಿಂ ಮೆಡ್ಲೇರಿ ಮಂಡಲ ಪಂಚಾಯಿತಿಗೆ ಸೇರಿದ ನೀಲಗಿರಿ ಮರಗಳನ್ನು ಕಡಿಯಲಿಂ ಪರವಾನಗಿಯನ್ನು ಕೊಡಲು ಅರಣ್ಯ ಅಧಿಕಾರಿಗಳಿಂ ವಿಳಂಬ ಮಾಡಿರುವುದು

ಶ್ರೀ ಕೆ.ಬಿ. ಕೋಳಿವಾಡ್.—ಮಾನ್ಯ ಅಧ್ಯಕ್ಷರೇ, ರಾಣೆಬೆನ್ನೂರು ತಾಲ್ಲೂಕು ಮೆಡ್ಲೇರಿ ಮಂಡಲ ಪಂಚಾಯಿತಿಯ ಮಾಲೀಕತ್ವಕ್ಕೆ ಸೇರಿದ ಸರ್ವೆ ನಂಬರಿನಲ್ಲಿ ನೀಲಗಿರಿ ಗಿಡಗಳನ್ನು ಬೆಳೆಸಿದ್ದು ಅವು ಈಗ ಕಟಾವು ಮಾಡಲಿಕ್ಕೆ ಬಂದಿದ್ದು ಮಂಡಲ ಪಂಚಾಯಿತಿಯವರು ಅರಣ್ಯ ಇಲಾಖೆಯವರ ಒಪ್ಪಿಗೆ ಕೇಳಿರುತ್ತಾರೆ, ಅರಣ್ಯ ಇಲಾಖೆಯ ಚೀಫ್ ಕನ್ಸರ್‌ವೇಟರ್ ಅವರು ಈಗಾಗಲೇ ಒಪ್ಪಿಗೆ ಕೊಡಲು ಕನ್‌ಸರ್‌ವೇಟರ್ (ಬೆಳಗಾಂ) ಇವರಿಗೆ ಆದೇಶ ಕೊಟ್ಟಿದ್ದು ಎರಡು ತಿಂಗಳಾದರೂ ಕನ್ಸರ್‌ವೇಟರ್‌ರವರು ಒಪ್ಪಿಗೆ ಕೂಡದೇ ಹಾಗೆಯೇ ಮುಂದಿಗಿಕೊಂಡಿದ್ದಾರೆ. ಗಿಡಗಳು ಒಣಗಿ ಹೋಗಿ ಕಳವಾಗುತ್ತಾ ಮಂಡಲ ಪಂಚಾಯತಿಗೆ ತುಂಬಲಾರದ ಅಂದರೆ ಲಕ್ಷಾಂತರ ರೂಪಾಯಿ ಹಣ